(ಸದನವು ಮಧ್ಯಾಹ್ನ 1 ಗಂಟೆ 50 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಉಪಸ್ಥಿತರಿದ್ದರು)

(ಭಾರತೀಯ ಜನತಾ ಪಕ್ಷದ ಶಾಸಕರುಗಳು ಮತ್ತು ಜೆ.ಡಿ(ಎಸ್) ಪಕ್ಷದ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು : ಈಗ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ದಯವಿಟ್ಟು ಅದನ್ನು ಎಲ್ಲರೂ ಕೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರೆ ನಿಮ್ಮ ಹೇಳಿಕೆಯನ್ನು ಕೊಡಿ.

ಶ್ರೀ ಈ. ತುಕಾರಾಂ : ಮಾನ್ಯ ಅಧ್ಯಕ್ಷರೆ, ಹಿಂದೆ ಬಿ.ಜೆ.ಪಿ ಸರ್ಕಾರವಿದ್ದಾಗ ಮನೆಗಳನ್ನು ನೀಡುವಲ್ಲಿ ಎಷ್ಟು ತಾರತಮ್ಯ ಮಾಡಿದ್ದರು ಎಂಬ ಬಗ್ಗೆ ಕೂಡ ತನಿಖೆಯಾಗಲಿ. ಆ ವಿಚಾರದ ಬಗ್ಗೆ ಕೂಡ ತಾವು ಚರ್ಚೆಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ನೀವು ಈಗ ಕುಳಿತುಕೊಳ್ಳಿ. ಮಾನ್ಯ ಸಚಿವರೆ, ನೀವು ಹೇಳಿಕೆ ಕೊಡಿ.

4. ವಸತಿ ಸಚಿವರ ಹೇಳಿಕೆ

ಶ್ರೀ ಎಂ.ಹೆಚ್. ಅಂಬರೀಶ್ (ಮಾನ್ಯ ವಸತಿ ಸಚಿವರು) : ಎಲ್ಲರಿಗೂ ಕೊಟ್ಟೇ ಕೊಡುತ್ತೇವೆ. ಯಾರು ಯಾರದ್ದು ಏನಿದೆಯೋ ಅದರ ಬಗ್ಗೆ requisition ಕಳುಹಿಸಿಕೊಡಿ. ಅದರ ಪ್ರಕಾರ ನಾನು ನೋಡಿ ನಿಮಗೆ ಹಣವನ್ನು ಒದಗಿಸಿ ನೀವು ಕೇಳುವಂಥ ಪ್ರಶ್ನೆಗಳಿಗೆ ಉತ್ತರ ಕೊಟ್ಟು ನಿಮ್ಮ ಆಸೆಗೆ ತಕ್ಕಂತೆ ನಡೆದುಕೊಳ್ಳುತ್ತೇನೆ, don't worry. ನೀವು ಹೇಳುವ ಪ್ರಕಾರ ಮಾಡಿಲ್ಲ. ಏನಾಗಿದೆ ಎಂಬುದೆಲ್ಲ ತಿಳುವಳಿಕಸ್ಥರಾದ ನಿಮಗೆಲ್ಲರಿಗೂ ಗೊತ್ತಿದೆ. ನಿಮ್ಮ ಕಾಲದಲ್ಲಿ ಏನಾಯಿತು ಎಂಬ ಹಳೆಯದನ್ನೆಲ್ಲವನ್ನೂ ಕೆದಕುವುದಕ್ಕೆ ಹೋಗಿ unnecessarily I don't want to argue, ಅದೆಲ್ಲವೂ ಈಗ ಬೇಕಾಗಿಲ್ಲ. ಅದನ್ನೆಲ್ಲವನ್ನೂ ಈಗ ಬಿಟ್ಟುಬಿಡಿ. ನಾವು ಈಗ 15 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೇವೆ. ಆ ಪ್ರಕಾರ 15 ಲಕ್ಷ ಮನೆಗಳನ್ನು ಕಟ್ಟುತ್ತೇವೆ. ಏನು ನನ್ನ ಒಬ್ಬನ ಕ್ಷೇತ್ರದಲ್ಲಿಯೇ 15 ಲಕ್ಷ ಮನೆಗಳನ್ನು ಕಟ್ಟುವುದಕ್ಕೆ ಆಗುತ್ತದೆಯೇ ? 224 ಕ್ಷೇತ್ರದಲ್ಲಿಯೂ ಮನೆಗಳನ್ನು ಕಟ್ಟಿಕೊಡುತ್ತೇವೆ.

ಈ ವಿಚಾರದಲ್ಲಿ ನಿಮಗೆ ಗ್ಯಾರಂಟಿ ಕೊಡುತ್ತೇನೆ. ಇನ್ನೂ ಒಂದು ಲಕ್ಷ ಸಹಿತ ಜಾಸ್ತಿಯಾದರೂ ಬೇಜಾರಿಲ್ಲ. ನಿಮಗೆ ಮಾಡಿಕೊಡುತ್ತೇವೆ ಬಿಡಿ.

ಅಧ್ಯಕ್ಷರು : Very good.

(ಸದನದ ಬಾವಿಯಲ್ಲಿ ನಿಂತು ಮಾತನಾಡುವುದು ದಾಖಲಾಗಿರುವುದಿಲ್ಲ)

ಅಧ್ಯಕ್ಷರು: ನೋಡಿ, ನೀವು ಹೀಗೇ ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಮಾನ್ಯ ಸಚಿವರು ಒಂದು ಭರವಸೆಯನ್ನು ಕೊಟ್ಟಿದ್ದಾರೆ. ದಯವಿಟ್ಟು ಆ ಭರವಸೆಯನ್ನು ನೀವು ನಂಬಿ. ಏಕೆಂದರೆ ನಾನು ಸರ್ಕಾರವಲ್ಲ. ಸರ್ಕಾರದವರು ಒಂದು ಪಾಸಿಟಿವ್ ರಿಪ್ಲೈಯನ್ನು ಈಗಾಗಲೇ ಕೊಟ್ಟಿದ್ದಾರೆ. ದಯವಿಟ್ಟು ನೀವುಗಳು ಅದನ್ನು ನಂಬಿ.

ಶ್ರೀ ಜಗದೀಶ್ ಶೆಟ್ಟರ್: (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟ ಉತ್ತರ ಸ್ಪಷ್ಟವಾದಂಥ ಉತ್ತರವಲ್ಲ. ಈಗ ಅವರು specific ಆಗಿ ಹೇಳಲಿ. ಯಾವ ಯಾವ ಕ್ಷೇತ್ರಕ್ಕೆ ಅಲಾಟ್ ಆಗಿಲ್ಲವೋ ಅವರ ಕ್ಷೇತ್ರಗಳಿಗೆ ಎರಡು ನೂರು, ಐದು ನೂರು, ನಾಲ್ಕು ನೂರು ಮನೆಗಳನ್ನು ಕೊಡುತ್ತೇವೆಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಲಿ. ಅವರುಗಳಿಗೆ ಎಷ್ಟು ಕೊಟ್ಟಿದ್ದಾರೋ ಅಷ್ಟು ಕೊಡಬೇಕು., ಇಲ್ಲದಿದ್ದರೆ ಈ ಲಿಸ್ಟ್ ಕ್ಯಾನ್ಸಲ್ ಮಾಡಿ re-allot ಮಾಡಲಿ.

ಶ್ರೀ ಈ ತುಕಾರಾಂ:– ಮಾನ್ಯ ಅಧ್ಯಕ್ಷರೆ, ಹಿಂದೆ ಬಿ.ಜೆ.ಪಿ ಸರ್ಕಾರವಿದ್ದಾಗ ಮನೆಗಳನ್ನು ನೀಡುವಲ್ಲಿ ಎಷ್ಟು ತಾರತಮ್ಯ ಮಾಡಿದ್ದರು, ಇದರಿಂದ ನಮಗೆಷ್ಟು ಅನ್ಯಾಯವಾಯಿತು ಎಂಬ ಬಗ್ಗೆ ಕೂಡ ತನಿಖೆಯಾಗಲಿ. ಆಗ ನಮಗೆ ಆಗಿರುವ ಅನ್ಯಾಯವನ್ನು ಮೊದಲು ಸರಿಪಡಿಸಲಿ. ಆಮೇಲೆ ಅವರಿಗೆ ಕೊಡೋಣ. ಹಿಂದೆ ಬಿ.ಜೆ.ಪಿ. ಸರ್ಕಾರವಿದ್ದಾಗ ಅವರು ಎಷ್ಟು ಮನೆಗಳನ್ನು ತೆಗೆದುಕೊಂಡಿದ್ದಾರೆ. ಏನಾಗಿದೆ, ಆಗ ಎಷ್ಟು ತಾರತಮ್ಯವಾಗಿದೆ ಅದೆಲ್ಲವೂ ಈಗ fulfilment ಆಗಬೇಕು.

ಅಧ್ಯಕ್ಷರು:– ಈಗ ಆ ವಿಚಾರ ಬೇಡ. ಈಗ ಮಾನ್ಯ ಸಚಿವರು ಒಂದು ಉತ್ತರವನ್ನು ಕೊಟ್ಟಿದ್ದಾರೆ. ದಯವಿಟ್ಟು ಅದನ್ನು ನಂಬಿ. ಮುಂದಿನ ದಿನಗಳಲ್ಲಿ ನಿಮ್ಮ

ನಿರೀಕ್ಷೆಗೆ ತಕ್ಕಂತೆ ತೀರ್ಮಾನ ಮಾಡದಿದ್ದರೆ ಆಗ ಮತ್ತೆ ಈ ಬಗ್ಗೆ ಕೇಳುವುದಕ್ಕೆ ನಿಮಗೆ ಪೂರ್ಣ ಅವಕಾಶವಿದೆ. ಈಗ let us honestly believe

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರದಲ್ಲಿ ಸ್ಪಷ್ಟತೆಯಿಲ್ಲ ನಾವೇನು ಚರ್ಚೆ ಮಾಡಿದ್ದೇವೆ. ಅದನ್ನು ತಿಳಿದುಕೊಂಡು ಅವರು ಸ್ಪಷ್ಟವಾಗಿ ಸತ್ಯಾಂಶ ಹೇಳಲಿ. ಮನೆಗಳನ್ನು ಕೊಡುತ್ತೇವೆಂದು ಅವರು ಹೇಳಲಿ. ಈ ಬಗ್ಗೆ ಕ್ಲಿಯರ್ ಆಗಿ ಹೇಳಲಿ, ಸದನದಲ್ಲಿ ಸುಮ್ಮನೆ ಸುಳ್ಳು ಭರವಸೆಯನ್ನು ಕೊಡುವುದಲ್ಲ.

(ಗೊಂದಲ)

ಅಧ್ಯಕ್ಷರು:– ನೋಡಿ, ಈಗ ಮಾನ್ಯ ಸಚಿವರು ಹೇಳಿರುವುದರಲ್ಲಿ ಒಂದು ಸ್ಪಷ್ಟತೆಯಿದೆ. ಎಲ್ಲರಿಗೂ ಕೊಡುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆಂದು ಹೇಳಿದ್ದಾರೆ. ನೀವು ಅವರು ಹೇಳಿರುವುದನ್ನು ನಂಬಿ. ಮುಂದೆ ನೋಡೋಣ, ಯಾವ ರೀತಿ ತೀರ್ಮಾನ ಮಾಡುತ್ತಾರೆಂದು.

ಶ್ರೀ ಜಗದೀಶ್ ಶೆಟ್ಟರ್:– ಬಿ.ಜೆ.ಪಿ. ಶಾಸಕರುಗಳು ಇರುವಂಥ ಕ್ಷೇತ್ರಗಳಿಗೆ ನಾವು ಮನೆಗಳನ್ನು ಕೊಡುವುದಿಲ್ಲವೆಂದು ಅವರು ಹೇಳಿಬಿಡಲಿ. ಅಷ್ಟನ್ನು ಅವರು ಹೇಳಿಬಿಡಲಿ. ನಾವು ಧರಣಿಯನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು:– ಬಿ.ಜೆ.ಪಿ. ಯವರು ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇಲ್ಲಿ ಶಾಸಕರಿಗೆ ಎಂದು ಹೇಳಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:– ಬಿ.ಜೆ.ಪಿ.ಶಾಸಕರುಗಳ ಕ್ಷೇತ್ರಕ್ಕೆ ಕೊಡುವುದಿಲ್ಲವೆಂದು ಅವರು ಹೇಳಿಬಿಡಲಿ.

ಶ್ರೀ ಎಂ.ಹೆಚ್. ಅಂಬರೀಶ್ (ವಸತಿ ಸಚಿವರು):– ಒಂದ್ನಿಮಿಷ ನಾನು ಉತ್ತರ ಹೇಳುತ್ತೇನೆ. ನಮ್ಮ ಸರ್ಕಾರ ಬಂದ ತಕ್ಷಣ ತಾರತಮ್ಯದಿಂದ ನೋಡುತ್ತಿದ್ದೀರೆಂದು ಹೇಳಿ ನಮ್ಮ ಮೇಲೆ ಆಪಾದನೆಯನ್ನು ತಾವು ಮಾಡುತ್ತಿದ್ದೀರಿ, O.K, I agree,

ಶ್ರೀ ಈ ತುಕಾರಾಂ:– ಹಿಂದೆ ಬಿ.ಜೆ.ಪಿ. ಯವರು ಎಷ್ಟು ಕೊಟ್ಟಿದ್ದಾರೆ?

ಶ್ರೀ ಎಂ.ಹೆಚ್. ಅಂಬರೀಶ್:– ಹಿಂದೆ ಏನಾಗಿದೆ ಎನ್ನುವ ಬಗ್ಗೆ ಮಾತನಾಡುವುದು ಬೇಡ. ಹಿಂದಿನದ್ದು ಹೋದರೆ ಎಲ್ಲಾ ಇಲಾಖೆಯದ್ದನ್ನು ತೆಗೆಯುತ್ತಾರೆ, ಅದೆಲ್ಲದರ ಬಗ್ಗೆ ಈಗ ನೋಡುತ್ತಾ ಕೂತರೆ ಈ ಐದು ವರ್ಷ ನಾವುಗಳು ಶಾಸಕರಾಗಿ, ಮಂತ್ರಿಗಳಾಗಿ ನೀವೂ ಮತ್ತು ನಾವು ಏನೂ ಕೆಲಸವನ್ನು ಮಾಡುವುದಿಲ್ಲ. ಕೇವಲ ಹಿಂದೆ ಏನಾಗಿದೆ ಎಂಬ ಬಗ್ಗೆಯೇ ಚರ್ಚೆ ಮಾಡಬೇಕಾಗುತ್ತದಷ್ಟೆ. ಆದುದರಿಂದ ಅದನ್ನು ಬಿಟ್ಟುಬಿಡಿ. ಮೊದಲ ವರ್ಷದಲ್ಲಿಯೇ ನಮ್ಮ ಮುಖ್ಯಮಂತ್ರಿಗಳು ಒಂದೊಂದು ಗ್ರಾಮ ಪಂಚಾಯಿತಿಗೆ ಇಪ್ಪತ್ತು, ಇಪ್ಪತ್ತು ಮನೆ ಎಂದು ಕೊಟ್ಟರು. ಎಲ್ಲರಿಗೂ ಕೊಟ್ಟರು. ಇದರಲ್ಲಿ ಕಾಂಗ್ರೆಸ್, ಬಿ.ಜೆ.ಪಿ. ಜೆ.ಡಿ.(ಎಸ್). ಇಂಡಿಪೆಂಡೆಂಟ್ ಎಂದು ಹೇಳದೇ ಎಲ್ಲರಿಗೂ ಕೊಟ್ಟುಕೊಂಡು ಬಂದರು. ಆಗ ನೀವೆಲ್ಲರೂ ಸುಮ್ಮನೆ ಇದ್ದಿರಿ. ಜೆ.ಡಿ.(ಎಸ್) ನವರಿಗೆ ಚೆನ್ನಾಗಿ ಆಗಿದ್ದರೂ ಸುಮ್ಮನೆ ಇದ್ದರು ಮತ್ತು ಈಗಲೂ ಸುಮ್ಮನೆ ಇದ್ದಾರೆ. ಓ.ಕೆ. ಅದಕ್ಕೂ ಅವರು ಗಲಾಟೆ ಮಾಡುತ್ತಾರೆ. ಮಾಡಲಿ, ಈಗಾಗಲೇ ಒಂದೊಂದು ಗ್ರಾಮ ಪಂಚಾಯಿತಿಗೂ ಇಪ್ಪತ್ತು, ಇಪ್ಪತ್ತು ಮನೆಗಳಂತೆ ಕೊಟ್ಟಿದ್ದೇವೆ. ಶಾಸಕರುಗಳು ಈ ಇಪತ್ತು ಮನೆಗಳಿಗೆ ಫಲಾನುಭವಿಗಳ ಪಟ್ಟಿಯನ್ನು ನನಗೆ ಯಾವತ್ತು ಕೊಟ್ಟಿರಿ ಹೇಳಿ. Tell me one instance. ನಾನು ರೆಕಾರ್ಡ್ ತೋರಿಸುತ್ತೇನೆ.

(ಗೊಂದಲ)

ಶ್ರೀ ಬಸರಾಜ ಬೊಮ್ಮಾಯಿ: ನಾವೆಲ್ಲಾ ಕೊಟ್ಟಿದ್ದೇವೆ. ನೀವು ಸುಮ್ಮನೆ ನಮ್ಮ ಮೇಲೆ ಹಾಕಬೇಡಿ. ಎಲ್ಲಾ ಕೊಟ್ಟಿದ್ದೇವೆ.

ಶ್ರೀ ಎಂ. ಹೆಚ್. ಅಂಬರೀಶ್ : ನನ್ನ ಹತ್ತಿರ ಮಾಹಿತಿ ಇದೆ, 20:20 beneficiary ಗೆ ಕೊಡುವುದಕ್ಕೆ ನಿಮಗೆ ಒಂದು ವರ್ಷ ಸಮಯ ಬೇಕು. ಇನ್ನು 500 ಮನೆಗಳನ್ನು ಕೊಡುವುದಕ್ಕೆ ಎಷ್ಟು ವರ್ಷ ಸಮಯ ಬೇಕು ಹೇಳಿ. ಆಗ ನನ್ನ ಅಧಿಕಾರ ಮುಗಿದುಹೋಗಿರುತ್ತದೆ.

ಶ್ರೀ ಬಸರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ ಅದು ಪಂಚಾಯತ್‌ರವರು ಕೊಡಬೇಕು. ಶಾಸಕರು ಕೊಡುವುದಿಲ್ಲ.

ಅಧ್ಯಕ್ಷರು: ನಾನು ತಮಗೆ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಅವರು ಮಾಡಿದ ಹೇಳಿಕೆ ಆಧಾರದ ಮೇಲೆ ನಾವೆಲ್ಲರೂ ದಯವಿಟ್ಟು ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ಅವರು ಹೇಳಿದ್ದಾರೆ. ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ಈಗ ಸದನವನ್ನು ಮುಂದೂಡಿ ಪುನಃ 3.00 ಗಂಟೆಗೆ ಮತ್ತೆ ಸೇರುವುದು.

(ಸದನದ ಕಲಾಪವು 2 ಗಂಟೆ 01 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3.00 ಗಂಟೆಗೆ ಸೇರಲು ನಿಶ್ಚಯಿಸಿತು)(ಭೋಜನ ವಿರಾಮದ ನಂತರ ಸಭೆಯು ಪುನಃ ಮಧ್ಯಾಹ್ನ 3.19ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)

5. (ಸದನ ಪ್ರಾರಂಭವಾದಾಗ ವಿರೋಧ ಪಕ್ಷವಾದ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿದ್ದರು)

ಅಧ್ಯಕ್ಷರು: ಮಾನ್ಯ ಸದಸ್ಯರು ದಯವಿಟ್ಟು ತಮ್ಮ ಸೀಟುಗಳಿಗೆ ಹೊಗಿ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ನಾನು ಒಂದು ವಿಷಯ ಹೇಳುತ್ತೇನೆ, ಕೇಳಿ, ವಾಸ್ತವಿಕವಾಗಿ ಈ ವಿಷಯ ಜರೂರಾಗಿರಲಿಲ್ಲ. ಬೇಡಿಕೆಗಳ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಇವುಗಳನ್ನೆಲ್ಲ ಪ್ರಸ್ತಾಪ ಮಾಡಲು ಅವಕಾಶವಿತ್ತು. ಆದಾಗ್ಯೂ ಕೂಡ, ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು ಎನ್ನುವ ಕಾರಣಕ್ಕೋಸ್ಕರ ನಾನು ಅವಕಾಶ ಮಾಡಿಕೊಟ್ಟು ಬಿಟ್ಟಿದ್ದೇನೆ. ಹೀಗಾದರೆ ನಾವು ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಅವರು ಉತ್ತರವನ್ನು ಹೇಳಿದ್ದಾರೆ. ಇನ್ನೂ ವಿಸ್ತೃತವಾದ ಚರ್ಚೆ ಮಾಡಬೇಕೆಂದರೆ, ಬೇಡಿಕೆಗಳು ಬಂದಾಗಲೂ ಮಾಡಬಹುದು. ಅವರು ಹೇಳಿದ ಮಾತಿನ ಮೇಲೆ ನಂಬಿಕೆ ಇಟ್ಟರೆ, ನ್ಯಾಯ ಕೊಡುವಂಥ ಕೆಲಸವನ್ನು ನಾವು ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ): ಮಾನ್ಯ ಅಧ್ಯಕ್ಷರೆ, ಸದನ ನಡೆಸಬೇಕು, ಬೇಡಿಕೆಗಳ ಮೇಲೆ ಚರ್ಚೆ ನಡೆಯಬೇಕು ಎನ್ನುವ ಕಳಕಳಿ ನಮಗೂ ಇದೆ. ಸದನವನ್ನು ಮುಂದಕ್ಕೆ ಹಾಕಬೇಕು. ವೆಲ್‌ಗೆ

. ಹೋಗಬೇಕು. ಧರಣಿ ಮಾಡಬೇಕು ಎನ್ನುವ ಉದ್ದೇಶ ನಮಗಿಲ್ಲ. ಆದರೆ ಮೇಲ್ನೋಟಕ್ಕೆ ಇಷ್ಟು ಅನ್ಯಾಯವಾದಂಥ ಸಂಧರ್ಭದಲ್ಲಿ ಇದನ್ನು ನಾವು ಹೇಗೆ ಸಹಿಸಿಕೊಳ್ಳಬೇಕು ?

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ನೀವು Senior most ಅನುಭವಿಗಳು.

ಶ್ರೀ ಜಗದೀಶ್ ಶೆಟ್ಟರ್: ನಾನು ಒಪ್ಪಿಕೊಳ್ಳುತ್ತೇನೆ ಅಧ್ಯಕ್ಷರೆ.

ಅಧ್ಯಕ್ಷರು: ವಾಸ್ತವಿಕವಾಗಿ ಇಂಥ ವಿಚಾರಗಳನ್ನು ಬೇಡಿಕೆಗಳ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಚರ್ಚೆ ಮಾಡಬಹುದಾಗಿತ್ತು. ಇದು ಜರೂರಾದ ಪ್ರಶ್ನೆ ಅಲ್ಲ.

ಶ್ರೀ ಜಗದೀಶ್ ಶೆಟ್ಟರ್: ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಚರ್ಚಿಸಬಹುದಿತ್ತು. ಆದರೆ ನಮಗೆ Result ಬೇಕಲ್ಲ?

ಅಧ್ಯಕ್ಷರು: ಏನು ಮಾಡುವುದಕ್ಕಾಗುತ್ತದೆ? ಸದನ ಏನು ತೀರ್ಮಾನ ಮಾಡುತ್ತದೋ ಅದರ ಮೇಲೆ ಹೋಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಸಭಾಧ್ಯಕ್ಷರೆ, ಮೇಲ್ನೋಟಕ್ಕೆ ತಪ್ಪು ಕಾಣುತ್ತಿದೆ. ಇಲ್ಲಿ ಅನ್ಯಾಯ ಮಾಡಿದ್ದಾರೆ. ಅನ್ಯಾಯ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುವಾಗ ಅದನ್ನು ಸರಿಮಾಡಲಿಕ್ಕೂ ಈ ಸರ್ಕಾರದಿಂದ ಆಗುತ್ತಿಲ್ಲ.

ಅಧ್ಯಕ್ಷರು: ಇದಕ್ಕೆ ಪ್ರತ್ಯೇಕವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಇದಕ್ಕೆ ಪ್ರತ್ಯೇಕವಾಗಿ ಚರ್ಚೆ ನಡೆಯುವ ಅವಶ್ಯಕತೆ ಇಲ್ಲ, ಮಾನ್ಯ ಅಧ್ಯಕ್ಷರೆ.

(ಗೊಂದಲ)

ಅಧ್ಯಕ್ಷರು : ನಾನು ಹೇಳುವವರೆಗೆ ಕೇಳಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನಿಮ್ಮ ನಿಮ್ಮ seat ಗಳಿಗೆ ಹೋಗಿ ಕುಳಿತುಕೊಳ್ಳಿ. ನೀವು ಹೇಳಿದ್ದೀರಿ, ಮಂತ್ರಿಯವರು ಕೇಳಿದ್ದಾರೆ, ಹೇಳಿದ್ದಾರೆ. ಅದಕ್ಕಿಂತ ಹೆಚ್ಚು ಚರ್ಚೆ ನಿರೀಕ್ಷೆ ಮಾಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಸರ್ಕಾರದಲ್ಲಿ ಅನ್ಯಾಯವಾಗಿದೆ, ಅದಕ್ಕೆ ನಾವು ನಿಮಗೆ ಅನ್ಯಾಯ ಮಾಡುತ್ತೇವೆಂದು ಹೇಳುವುದು ಇದಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು. ಈಗ ಬೇಡಿಕೆ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ ಸಾಕು.

(ಗೊಂದಲ)

ಅಧ್ಯಕ್ಷರು: ಈಗ ಬೇಡಿಕೆ ಮಂಡಿಸಿ.

(ಗೊಂದಲ)

6. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಯ ಮಂಡನೆ

ಬೇಡಿಕೆ ಸಂಖ್ಯೆ:01 – ಕೃಷಿ ಮತ್ತು ತೋಟಗಾರಿಕೆ

ಶ್ರೀ ಕೃಷ್ಣಭೈರೇಗೌಡ(ಕೃಷಿ ರಾಜ್ಯ ಸಚಿವರು) ಮತ್ತು ತೋಟಗಾರಿಕೆ ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31–03–2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆಗಳ ಕ್ರಮಾಂಕ 01– "ಕೃಷಿ ಮತ್ತು ತೋಟಗಾರಿಕೆ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 531800.59 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 7900.28 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಈ ಸಭೆಯು ಮಾಡಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

(ಗೊಂದಲ)

ಅಧ್ಯಕ್ಷರು: ನಾನು name ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಈಗ ಬೇಡಿಕೆ ಮೇಲೆ ಚರ್ಚೆ ಮಾಡುವವರು ಯಾರಿದ್ದೀರಿ, ಮಾಡಿ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಮಾಡಿ.

(ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಯಾವುದೇ ವಿಚಾರವನ್ನಾದರೂ ಕೂಡ, ಇದನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗಬಹುದು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹಣ ಇಲ್ಲ ಏನೂ ಇಲ್ಲ, ಹಣ ಇಲ್ಲದೆ ಮಾನ್ಯ ಮಂತ್ರಿಯವರು ಹೇಗೆ ಸರಿಮಾಡುತ್ತಾರೆ?

(ಗೊಂದಲ)

(ಮಾನ್ಯ ಸದಸ್ಯರಾದ ಕಾಗೇರಿಯವರು ಸದನದ ಬಾವಿಯಿಂದ ಮಾತನಾಡಿದರು)

ಶ್ರೀ ಎಂ.ಹೆಚ್. ಅಂಬರೀಶ್ (ವಸತಿ ಸಚಿವರು): ಕಾಗೇರಿಯವರೆ, ನಿಮಗೆ ಆಗಲೇ ನಾನು ಹೇಳಿದನಲ್ಲ. ನಿಮಗೆ ಎಷ್ಟು ಬೇಕು, ನಿಮ್ಮ ಅವಶ್ಯಕತೆ ಎಷ್ಟಿದೆ ಎಂದು ಕೊಡಿ, ನಾನು ನನ್ನ ಬಜೆಟ್ ಅನ್ನು ನೋಡಿಕೊಂಡು, ಜೊತೆಗೆ ಎಷ್ಟು ಕೊಡುವುದಕ್ಕೆ ಸಾಧ್ಯವಿದೆ, ಅಷ್ಟನ್ನೂ ನಿಮಗೆ ಮಾಡಿಕೊಡುತ್ತೇನೆ, ನಿಮಗೆ ಅನ್ಯಾಯವಾಗದಿದ್ದ ಹಾಗೆ ಎಂದು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಬಜೆಟ್ ಇಲ್ಲವಲ್ಲ.

(ಗೊಂದಲ)

ಶ್ರೀ ಎಂ.ಹೆಚ್. ಅಂಬರೀಶ್: ಕೊಡೋಲ್ಲ ಎಂದು ನಾನು ಹೇಗೆ ಹೇಳುವುದಕ್ಕೆ ಸಾಧ್ಯ? 15 ಲಕ್ಷ ಮನೆಯನ್ನೂ ಕಾಂಗ್ರೆಸ್‌ನವರೇ ಕಟ್ಟುತ್ತಾರೆಯೇ? ಕಟ್ಟುವುದಿಲ್ಲ. ನೀವೂ ಕಟ್ಟಬೇಕಾಗುತ್ತದೆ. ನಿಮಗೂ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಎಂ.ಹೆಚ್. ಅಂಬರೀಶ್: ಇದನ್ನು ನಾನು ಕೊಡುತ್ತೇನೆಂದು ಹೇಳಿದ ಮೇಲೆ ಸ್ವಲ್ಪ ವಿಶ್ವಾಸ ನಮ್ಮ ಮೇಲೂ ಇರಲಿ. ಎಲ್ಲರಿಗೂ ಕೊಡುತ್ತೇನೆಂದು ಹೇಳಿದ್ದೇನೆ. ನಿಮಗೆಲ್ಲರಿಗೂ ನಿಮ್ಮ ಬೇಡಿಕೆ ಏನಿದೆ ಕೊಡುತ್ತೇನೆ, ಬಿಡಿ ಅದನ್ನು, ನೀವು ಅಕಸ್ಮಾತ್